9

# ದೇವರು ಮತ್ತು ವಿಜ್ಞಾನ ಒಪ್ಪಿಕೊಳ್ಳುವವೋ?

ಹಾರ್ವರ್ಡ್ ಯುನಿವರ್ಸಿಟಿಯ ಪ್ರೊಫೆಸರ್ ಬೆಂಜಾಮಿನ್ ಪಿಯರ್ಸ್ ಅವರ ಪ್ರಕಾರ, "ವಿಜ್ಞಾನ ಮತ್ತು ಧರ್ಮ, ಒಂದೇ ಮನೆಯಲ್ಲಿ ಹುಟ್ಟಿದವುಗಳು ಮತ್ತು ಆ ಮನೆಯು ತನ್ನಷ್ಟಕ್ಕೆ ವಿಭಾಗವಾಗಿರುವದಿಲ್ಲ. ಅವುಗಳ ಮಧ್ಯದಲ್ಲಿ ಸ್ಪಷ್ಟವಾದ ಭಿನ್ನತೆ ಇರುತ್ತದೆ, ಮುಂದೆಯೂ ಇರುವುದು; ಆದರೆ ಅದು ಮಾನವ ಮೂಲದ್ದಾಗಿರುವುದು, ಅದರ ದೊಡ್ಡಸ್ತಿಕೆಯಿಂದಲ್ಲ ಆದರೆ ನಮ್ಮ ಜ್ಞಾನದ ತಪ್ಪುಗಳಿಂದ ಹುಟ್ಟಿದ್ದಾಗಿರುವುದು." ನಿಜವಾದ ವಿಜ್ಞಾನ ಮತ್ತು ನಿಜ ವಾದ ಧರ್ಮದ ಮಧ್ಯದಲ್ಲಿ ವಿರೋಧ ಸಮಾಂತರ ರೇಖೆಗಳು ಕೂಡುವಷ್ಟೇ. ಅಸಾಧ್ಯ ವಾದದ್ದಾಗಿರುವುದು. ಸತ್ಯವು ತನ್ನನ್ನೆ ವಿರೋಧಿಸಿಕೊಳ್ಳುವದಿಲ್ಲ. ದೇವರು ಸತ್ಯವಾಗಿದ್ದಾನೆ (ಯೋಹಾನ 14:6), ದೇವರು ಪ್ರಥಮ ವಿಜ್ಞಾನಿ, ಮತ್ತು ದೇವರು "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿದ್ದಾನೆ" (ಇಬ್ರಿಯ 12:2).

ಎಲ್ಲಾ ಸೃಷ್ಟಿಯಲ್ಲಿ, ಬಿಳಾಮನ ಪ್ರವಾದನೆಯಂತೆ ಒತ್ತಡ ಹೇರದ ಹಾಗೂ ತಡೆಗಟ್ಟಲಾಗದ ಉದ್ಗಾರವಿರುವುದು: "ದೇವರು ತಾನು ಮಾಡುವ ಕೆಲಸವನ್ನು ತಾತ್ಕಾಲದಲ್ಲಿಯೇ ... ಸಮಯೋಚಿತವಾಗಿ ತಿಳಿಸುವನು!" (ಅರಣ್ಯಕಾಂಡ 23:23ಬಿ), "ದಿನವು ದಿನಕ್ಕೆ ಪ್ರಕಟಿಸುವಾಗ" (ಕೀರ್ತನೆ 19:2), ಗಗನಮಂಡಲವು ಆತನ ನೀತಿಯನ್ನು ಪ್ರಸಿದ್ಧಿಪಡಿಸಿತು ಎಂದು ಕೀರ್ತನೆ 97:6ರಲ್ಲಿ ಇಸ್ರಾಯೇಲಿನ ಕವಿಯು ಹಾಡಿದನು. ಮಾನವ ವಿಜ್ಞಾನಿಗಳ ಸಾಧನೆಗಳು ಆಶ್ಚರ್ಯಕರವಾದವುಗ ಳಾಗಿರುವಂತೆಯೇ, ಹೆಚ್ಚು ದೊಡ್ಡ ವಿಜ್ಞಾನಿಯು ಎಲ್ಲಾ ವಸ್ತುಗಳನ್ನು ನಿರ್ಮಿಸಿದನು ಮತ್ತು ಎಲ್ಲಾ ನಿಯಮಗಳನ್ನು ರೂಪಿಸಿದನು. ಮಾನವರಲ್ಲಿ ಅತೀ ದೊಡ್ಡವನು ಸೃಷ್ಟಿಸಲಾರನು; ಅವರು ದೇವರು ಮಾಡಿದ ಉಪಕರಣಗಳನ್ನು ಮಾತ್ರ ಉಪಯೋಗಿ ಸಬಲ್ಲರು. ಮನುಷ್ಯರು "ದೇವರ ನಂತರ ಆತನ ವಿಚಾರಗಳನ್ನು" ಯೋಚಿಸ ಬಲ್ಲನು. ಅವರು ದೇವರ ಹೆಚ್ಚು ಹೆಚ್ಚು ವಿಚಾರಗಳನ್ನು ಕಂಡು ಕೊಂಡಂತೆ ಇನ್ನೂ ಹೆಚ್ಚು ಕಲಿತು ಕೊಳ್ಳಬೇಕಾದದ್ದರ ಬಗ್ಗೆ ಭಯ ತೋರಿಸುವರು. "ವಿಷಯವನ್ನು ರಹಸ್ಯಮಾಡುವದು ದೇವರ ಮಹಿಮೆ; ವಿಷಯವನ್ನು ವಿಮರ್ಶೆಮಾಡುವುದು ಅರಸರ ಮಹಿಮೆ" (ಜ್ಞಾನೋಕ್ತಿ 25:2).

ವಿಲ್ಬರ ಮತ್ತು ಓರವಿಲ್ಲ್ ರೈಟ ಸಹೋದರರು, 1903ರಲ್ಲಿ ಮೊದಲನೆಯ ವಿಮಾನ ಹಾರಿಸಿದವರು, ಪ್ರಶಂಸೆಗೆ ಯೋಗ್ಯರಾಗಿದ್ದಾರೆ; ಆದರೆ ವಾಯುಚಲನ ಶಾಸ್ತ್ರವನ್ನು ರಚಿಸಿದವನಿಗೆ ಇನ್ನೂ ಹೆಚ್ಚು ಸಲ್ಲಬೇಕಾಗಿದೆ. ರಕ್ತಾಭಿಸರಣ ಕಂಡುಹಿಡಿದ ವಿಲಿಯಮ್ ಹಾರ್ವೆಯ ಕಾರ್ಯವು (1628) ವಿಶ್ವವ್ಯಾಪಿಯಾಗಿ ಪ್ರಶಂಸಿಸಲ್ಪಟ್ಟಿದೆ, ಆದರೆ, ಪ್ರಾಥಮಿಕ ಗೌರವವು ರಕ್ತವು ಹರಿಯುವಂತೆ ಮಾಡಿದಾತನಿಗೆ ಸಲ್ಲುತ್ತದೆ. "ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು

ಚೆನ್ನಾಗಿ ಗ್ರಹಿಸಿಕೊಂಡಿದೆ'' (ಕೀರ್ತನೆ 139:14) ಎಂದು ಕೀರ್ತನೆಗಾರನು ಹೇಳಿದ್ದಾನೆ. ಹಾಗಾದರೆ ವಿಜ್ಞಾನ ಮತ್ತು ಧರ್ಮ ಯಾವಾಗಲೂ ಹೊಂದಿಕೊಳ್ಳುವದಿಲ್ಲ ಎಂಬ ಯೋಚನೆಯು ಅಸಂಬದ್ಧವಾದದ್ದಾಗಿದೆ, ವಿಜ್ಞಾನದ ದೇವರ ಬಗ್ಗೆ ತಪ್ಪಾದ ಭಾವನೆಗಳು ಮತ್ತು ಧರ್ಮದ ದೇವರ ಬಗ್ಗೆ ತಪ್ಪಾದ ಭಾವನೆಗಳು ಒಂದಕ್ಕೊಂದು ಅಡ್ಡ ಬರಬಹುದು, ಆದರೆ ಸತ್ಯವು ಶಾಶ್ವತವಾಗಿ ಉಳಿಯುವುದು. ಜ್ಞಾನವು ಅದರ ಮಕ್ಕಳಿಂದ ನೀತಿ ಎಂದು ಎಣಿಸಲ್ಪಟ್ಟಿದೆ.

ಕೊಪರ್ನಿಕನ್ ಪದ್ಧತಿಯನ್ನು ರೋಮ್ ತಿರಸ್ಕರಿಸಿದಂಥ ಮತ್ತು ಗಲಿಲಿಯೋ ಗಾಲಿಲೈಯನ್ನು ನಡಿಸಿಕೊಂಡ ರೀತಿಯಂಥ ಸುಳ್ಳು ಧರ್ಮವು - ಧರ್ಮಕ್ಕೆ ವಿರುದ್ಧವಾಗಿ ಕೆಲವು ವಿಜ್ಞಾನಿಗಳಲ್ಲಿ ತಿರಸ್ಕಾರವನ್ನು ಹುಟ್ಟಿಸಿದೆ. ಗಲಿಲಿಯೋನು 1543ರಲ್ಲಿ ನಿಕೋಲಾಸ್ ಕೊಪರ್ನಿಕಸ್‌ನಿಂದ ಸೂಚಿಸಲ್ಪಟ್ಟ ಹೆಲಿಯೊ ಸೆಂಟ್ರಿಕ್ (ಸೂರ್ಯ-ಕೇಂದ್ರಿಕೃತ) ಜಾಗತಿಕ ಪದ್ಧತಿಯಲ್ಲಿ ದೃಢವಾದ ನಂಬಿಕೆಯುಳ್ಳವನಾಗಿದ್ದನು. 1616ರಲ್ಲಿ ರೋಮ್‌ದಲ್ಲಿಯ ''ಹೋಲಿ ಆಫೀಸ್'' ಕೊಪರ್ನಿಕನಿಜಮ್‌ದ ವಿರುದ್ಧವಾಗಿ ಒಂದು ಆಜ್ಞಾಪತ್ರವನ್ನು ಹೊರಡಿಸಿತು. ಯಾಕಂದರೆ ಈ ಸಿದ್ಧಾಂತವು ವಿಶ್ವದ ತಿಳುವಳಿಕೆ ಬಗ್ಗೆ ಭೂಮಿ-ಕೇಂದ್ರೀಕೃತವಾದ ಕಥೋಲಿಕ್ ಸಭೆಯ ತತ್ವಕ್ಕೆ ವಿರುದ್ಧವಾಗಿತ್ತು. ಗಲಿಲಿಯೋನ ಕೃತಿಗಳು ಪ್ರತಿಬಂಧಿಸಲ್ಪಟ್ಟವು ಮತ್ತು ''ಪಾಖಂಡವಾದದ ಬಲವಾದ ಸಂಶಯಕ್ಕಾಗಿ'' ಜೀವಾವಧಿ ಸೆರೆಮನೆವಾಸದ ದಂಡನೆ ವಿಧಿಸಲ್ಪಟ್ಟನು. ಆ ದಂಡನೆಯು ಬೇಗನೇ ಗೃಹಬಂಧನವಾಗಿ ಬದಲಾಯಿಸಲ್ಪಟ್ಟಿತು.[1]

ವ್ಯತಿರಿಕ್ತವಾಗಿ, ಸುಳ್ಳು ವಿಜ್ಞಾನಿಗಳು ಕೆಲವು ಧಾರ್ಮಿಕರನ್ನು ದೂರ ಮಾಡಿದ್ದಾರೆ. ಹೀಗಿದ್ದರೂ, ಯಾವದೇ ಕ್ಷೇತ್ರದಲ್ಲಿಯಾಗಲಿ - ಬಹಳ ಸಲ ಅದು ದುರಾಗ್ರಹದಿಂದ ಇಲ್ಲವೇ ವೈರತ್ವದಿಂದ ಆತಂಕಗೊಳಿಸಲ್ಪಟ್ಟಿದ್ದರೂ, ಸತ್ಯವು ಸತ್ಯವಾಗಿಯೇ ಇರುತ್ತದೆ. ''ಸತ್ಯವನ್ನು ಹುಡುಕಿರಿ; ಅದು ಬಂದಾಗ ಬರಲಿ; ಅದರ ಕ್ರಯ ಏನೇ ಆಗಲಿ'' ಎಂದು ಡಾ. ಸ್ಪಾರ್ರೋ ಹೇಳಿದ್ದಾರೆ. ಅವನಿಗಿಂತ ದೊಡ್ಡವನಾದ ಒಬ್ಬಾತನು, ''ಸತ್ಯವನ್ನು ತಿಳಿದು ಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು'' (ಯೋಹಾನ 8:32) ಎಂದು ವಾಗ್ದಾನ ಮಾಡಿದ್ದಾನೆ. ವಿಜ್ಞಾನದಲ್ಲಿಯಂತೆ, ಧರ್ಮದಲ್ಲಿಯ ಸತ್ಯಗಳು ಜನರನ್ನು ಅಜ್ಞಾನದಿಂದ, ಮೂಢನಂಬಿಕೆಯಿಂದ, ರೋಗಗಳಿಂದ ಮತ್ತು ಕತ್ತಲೆಯಿಂದ ಸತತವಾಗಿ ಬಿಡುಗಡೆ ಮಾಡುತ್ತವೆ.

ಹೀಗಿದ್ದರೂ, ಧರ್ಮದಲ್ಲಿ ಸತ್ಯವೆಂದು ಕರೆಯಲ್ಪಟ್ಟ ಪ್ರತಿಯೊಂದೂ ಕ್ರಿಸ್ತನದಾಗಿರುವದಿಲ್ಲ. ''ಪ್ರಿಯರೇ, ಅನೇಕಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು'' (1 ಯೋಹಾನ 4:1) ಎಂದು ಯೋಹಾನನು ಎಚ್ಚರಿಸಿದ್ದಾನೆ. ಅದೇ ರೀತಿಯಲ್ಲಿ ಪೇತ್ರನು ಹೇಳಿದ್ದಾನೆ: ''ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳು ಪ್ರವಾದಿಗಳೂ ಎದ್ದರಲ್ಲಾ; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು ನಾಶಕರವಾದ ಮತ ಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದು ಹೇಳುವವರೂ ಆಗಿದ್ದು ಫಕ್ಕನೇ ತಮ್ಮ ಮೇಲೆ ನಾಶನವನ್ನು ಬರಮಾಡಿಕೊಳ್ಳುವರು'' (2 ಪೇತ್ರ 2:1). ಒಬ್ಬ ಧಾರ್ಮಿಕ ವ್ಯಕ್ತಿಯು ದೇವರು ಭೂಮಿಯನ್ನು ಕ್ರಿ.ಪೂ. 4004ರಲ್ಲಿ ಮಾಡಿದನೆಂದು ಹೇಳಿಕೆ ಕೊಡುವಾಗ, ಅವನು ಹುರುಳಿಲ್ಲದ ಹೇಳಿಕೆಯನ್ನು ಕೊಡುತ್ತಿದ್ದಾನೆ. ದೇವರು ತಾನು ಅದನ್ನು ''ಆದಿಯಲ್ಲಿ''ಮಾಡಿದೆನೆಂದು ಮಾತ್ರ ಹೇಳಿದನು (ಆದಿಕಾಂಡ 1:1), ಅದು

ಯಾವಾಗಲಾದರೂ ಆಗಿದ್ದಿರ ಬಹುದು.

ಅದರಂತೆಯೇ, ವಿಜ್ಞಾನದಲ್ಲಿ ಸತ್ಯವೆಂದು ಕರೆಯಲ್ಪಟ್ಟ ಪ್ರತಿಯೊಂದು ವಿಜ್ಞಾನವಾಗಿರುವದಿಲ್ಲ. ಹೆಚ್ಚಾದದ್ದು ವೈಜ್ಞಾನಿಕವಾದದ್ದಾಗಿರುವದಿಲ್ಲವೆಂದು ಕಂಡು ಹಿಡಿಯಲ್ಪಟ್ಟಿದೆ (ಘಟನಾತ್ಮಕ ಜ್ಞಾನ), ಆದರೆ ಕೇವಲ ಮಾನವ ಕಲ್ಪನೆಯಾಗಿದೆ. ಆತ್ಮ ಸಂತೋಷದ ಸಂತತಿಯು ವೈಜ್ಞಾನಿಕವಾದದ್ದೆಂದು ಯೋಚಿಸುವ ಸಮಯವಿತ್ತು. ವಿ. ಜೆ. ಓಬ್ರಿಯನ್‌ನು ಒಮ್ಮೆ ಚೆನ್ನಾಗಿ ಕಾಣುವ ಸಿದ್ಧಾಂತವನ್ನು "ಕಪ್ಪೆಗಳು, ನೊಣಗಳು, ಗುಂಗಾಡುಗಳು ಕೆಸರು ಮತ್ತು ಮಣ್ಣಿನಿಂದ; ಜೇನು ನೊಣಗಳು ಕರುವಿನ ಮಾಂಸದಿಂದ್ಯೆದ ಜೀರುಂಡೆಗಳು ಮಿಶ್ರ ಜಾತಿಯ ಪಶುಗಳ ಮಾಂಸದಿಂದ; ಚೇಳುಗಳು ಏಡಿಗಳಿಂದ ಬಂದವೆಂದು" ಸಂಕ್ಷೇಪಿಸಿ ಹೇಳಿದನು. "ಜ್ಞಾನ ಪ್ರಕಾಶ ಹೊಂದಿದ" ಕ್ರೈಸ್ತನು ಸುಳ್ಳುವಿಜ್ಞಾನವನ್ನು ಸ್ವೀಕರಿಸಿದ್ದರೆ, "ಜೀವನ ಸೃಷ್ಟಿಯ ಬಗೆಗಿನ ಪ್ರಚಲಿತವಿಲ್ಲದ ಬೈಬಲಿನ ಕಥೆಯನ್ನು" ನಂಬಬಾರದು ಎಂದು ಬೋಧಿಸಲ್ಪಟ್ಟರೆ, ಕರ್ತನಿಗೆ ಆ ಕ್ರೈಸ್ತನ ನಿಷ್ಠೆಯ ಬಗ್ಗೆ ಇಂದು ನಾವು ಏನನ್ನು ಯೋಚಿಸುತ್ತೇವೆ? ಅಂಥವನು "ವಿಜ್ಞಾನವನ್ನು ತನ್ನ ದೇವರನ್ನಾಗಿ ಸ್ವೀಕರಿಸುವಂತೆ" ಮಾಡಲ್ಪಟ್ಟಿದ್ದಾನೆ ಮತ್ತು ಯೋಜನೆಯಲ್ಲಿ ಕ್ರಿಸ್ತನು ಹೊಂದಿಕೊಂಡರೆ ಅವನು ಕ್ರಿಸ್ತನನ್ನು ಸ್ವೀಕರಿಸುವನು; ಇಲ್ಲದಿದ್ದರೆ ಅವನು ಕ್ರಿಸ್ತನನ್ನು ತಿರಸ್ಕರಿಸಿ ಬಿಡುತ್ತಿದ್ದನು ಎಂದು ತೋರುತ್ತದೆ. "ಸ್ವೀಕರಿಸಲ್ಪಟ್ಟ ವಿಜ್ಞಾನವು" ತಾನೇ ವ್ಯತಿರಿಕ್ತವಾದದ್ದಾದರೆ ಅಂಥ ನಂಬಿಕೆಯಿಲ್ಲದವನು ಎಷ್ಟು ನಾಚಿಕೆಗೆ ಗುರಿಯಾಗುವನು!

ವಿಜ್ಞಾನವು ವ್ಯತಿರಿಕ್ತಗೊಂಡಿದೆ. ಸ್ವಯಂಪ್ರೇಲಿತ ಸಂತತಿಯು ತಿರಸ್ಕರಿಸಲ್ಪಟ್ಟಿದೆ. ವಿಜ್ಞಾನಿಗಳು ತಾವು ತಪ್ಪಾಗಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಕೆಲವರಿಗೆ ಅಂಥ ತಿರುಗುವಿಕೆಯು ಅವರ ನಿರೀಕ್ಷೆಗೆ ವಿರುದ್ಧವಾಗಿ ಹೋಗಿದೆ. ಆದರೆ ಅವರು ಅದನ್ನು ಮಾಡಲೇ ಬೇಕಾಗಿತ್ತು. ಥೊಮಸ್ ಎಚ್. ಹಕ್ಸಲೇ ಹೀಗೆ ಬರೆದಿದ್ದಾನೆ, "ಜೀವವು" ಜೀವದಿಂದ ಮಾತ್ರವೇ ಬರುವದೆಂಬ ತತ್ವವು ಎಲ್ಲಾ ಸಮಯದಲ್ಲಿ ಜಯಶಾಲಿಯಾಗಿದೆ. "ನಾವು ಜೀವಿಸುತ್ತೇವೇ, ಚಲಿಸುತ್ತೇವೇ ಮತ್ತು ಅಸ್ತಿತ್ವದಲ್ಲಿರುತ್ತೇವೆ" (ಅಪೊಸ್ತಲರ ಕೃತ್ಯಗಳು 17:28) ಆತನಿಂದ ಎಲ್ಲಾ ಜೀವವು ಬರುತ್ತದೆ ಎಂದು ಬೈಬಲ್ ಬೋಧಿಸುತ್ತಿದ್ದರಿಂದ ಅವರು ಈ ವೈಜ್ಞಾನಿಕ ತಪ್ಪು ಭ್ರಮೆಯನ್ನು ತಿರಸ್ಕರಿಸಲಿಲ್ಲ, ಆದರೆ ಕೇವಲ ಸೃಷ್ಟಿಯ ರುಜುವಾತುಗಳಿಂದಲೆ. ಕ್ರೈಸ್ತನಿಗೆ, ಪರಿಪೂರ್ಣ ಕ್ರಿಸ್ತನಲ್ಲಿಯ, ಸೃಷ್ಟಿಯ ಕರ್ತನಲ್ಲಿ ಮತ್ತು ನಮ್ಮ ಸ್ವಂತ ಸಹೋದರನಲ್ಲಿ ನಂಬಿಕೆಯು, ಎಲ್ಲಾ ಸತ್ಯಗಳಿಗೆ ಕಾರಣವಾಗಿದೆ. ಇಂದಿನ "ಸ್ವೀಕೃತ ವಿಜ್ಞಾನವು" ಕ್ರಿಸ್ತನನ್ನು ವಿರೋಧಿಸಿದರೆ, ನಿಷ್ಠೆಯುಳ್ಳ ಶಿಷ್ಯನು ಗಲಿಬಿಲಿಗೊಳ್ಳುವದಿಲ್ಲ. ಅದು ಮೊದಲು ಹಾಗೆ ಮಾಡಿದೆ, ಆದರೆ ಯೇಸು ಕ್ರಿಸ್ತನು "ನಿನ್ನೆ ಇದ್ದ ಹಾಗೆಯೇ ಇಂದು ಮತ್ತು ಎಂದೆಂದಿಗೂ ಇರುವನು" (ಇಬ್ರಿಯ 13:8).

ನಾಸ್ತಿಕನಾದ ಪ್ರೆಂಚ್ ಸೈಮನ್ ಡೆ. ಲಾಪ್ಲೇಸನು (1749-1827) ಆದಿಕಾಂಡ ಗ್ರಂಥದಲ್ಲಿ ಬೋಧಿಸಿದ ಸತ್ಯಗಳನ್ನು ತಿರಸ್ಕರಿಸಿದಾಗ ಮತ್ತು ಸೃಷ್ಟಿಯ ಬಗ್ಗೆ ತನ್ನ "ಅಸ್ಪಸ್ಟ ಸಿದ್ಧಾಂತವನ್ನು" ಬದಲಾಗಿ ಹೇಳಿದಾಗ ಅನೇಕರು ಗಲಿಬಿಲಿಗೊಂಡರು. ಅನೇಕ ವಿಜ್ಞಾನಿಗಳು ಸೃಷ್ಟಿಯೊಂದಿಗೆ ನಡೆದಾಡಿದಷ್ಟು ದೇವರೊಂದಿಗೆ ನಡೆದಾಡದೇ ಇದ್ದುದರಿಂದ ಹಾಗೂ ಮಾನವ ಪುಸ್ತಕಗಳನ್ನು ಓದಿದಂತೆ ಅನುದಿನವೂ ಬೈಬಲನ್ನು ಓದದೇ ಇದ್ದುದರಿಂದ ಅವರು ಈ ಹೊಸ ತತ್ವದೊಂದಿಗೆ ಸಂಪೂರ್ಣವಾಗಿ ಬಹಳ ಸಂತೋಷಪಟ್ಟರು. ಖಗೋಳ ಶಾಸ್ತ್ರವು ಪರಿಣಾಮ ಮಾಡಿದ್ದಲ್ಲದೇ, ಭೂಗರ್ಭಶಾಸ್ತ್ರವೂ ಭರವಸೆಯಿಂದ ಅದರ ಮೇಲೆ ಅವಲಂಬಿಸಿತ್ತು. "ಒಂದು ನೂರು ವರ್ಷಗಳ ವರೆಗೆ

ಅದು ಗಂಭೀರವಾಗಿ ಪ್ರಶ್ನಿಸಲ್ಪಡಲಿಲ್ಲ" ಎಂದು W. W. ಹೆರಿಂಗ್ ಹೇಳಿದರು. ಹಾಗಿದ್ದರೂ, ಬೈಬಲಿನ ದೀನ ವಿಶ್ವಾಸಿಗಳು ಚಕಿತಗೊಳ್ಳಲಿಲ್ಲ, ಯಾಕಂದರೇ ಅವರ ವಿಶ್ವಾಸವು "ಮಾನುಷ ಜ್ಞಾನವನ್ನು ಆಧಾರಮಾಡಿಕೊಳ್ಳದೇ ದೇವರ ಶಕ್ತಿಯನ್ನು ಆಧಾರಮಾಡಿಕೊಂಡಿತ್ತು" (1 ಕೊರಿಂಥ 2:5).

ಜ್ಯೋತಿಶಾಸ್ತ್ರವು ಒಂದು ಸಮಯದಲ್ಲಿ "ವೈಜ್ಞಾನಿಕವಾದದ್ದು" ಎಂದು ಕರೆಯಲ್ಪಟ್ಟಿತು. ಪ್ರತಿಯೊಂದು ಕೋರ್ಟಿನಲ್ಲಿ ಆಕಾಶಗಳ ವ್ಯಾಖ್ಯಾನಕಾರನು ನೇಮಿಸಲ್ಪಡುತ್ತಿದ್ದನು. ಆರ್ಚ್ಡ್ಯುಕ್ ವಾಲ್ಲೆನ್‌ಸ್ಟೈನನು ಮೂವತ್ತು ವರ್ಷಗಳ ಯುದ್ಧದಲ್ಲಿ ರಾಜಸೈನ್ಯಗಳ ಬೊಹೆಮಿಯನ್ ಫೀಲ್ಡ್ ಮಾರ್ಶಲ್‌ನು, "ತನ್ನ ಸಮೀಪದಲ್ಲಿಟ್ಟುಕೊಂಡಿದ್ದ ತನ್ನ ಖಗೋಳಶಾಸ್ತ್ರಜ್ಞನ ಮೇಲೆ ಬಹಳ ವಾಗಿ ಅವಲಂಭಿಸಿದ್ದನು" ಎಂದು ರೊಲ್ಲಿನ್ ಟಿ. ಚೆಂಬರೇನ ವರದಿ ಮಾಡಿದ್ದಾನೆ. ಬಹಳ ಪ್ರಸಿದ್ಧ ಖಗೋಳವಿಜ್ಞಾನಿ ಜೋಹಾನ್ಸೆಸ್ ಕೆಪ್ಲರನು ವಾಲ್ಲೆನ್‌ಸ್ಟೈನನಿಗಾಗಿ ಜನ್ಮಕುಂಡಲಿಯನ್ನು ತಯಾರಿಸಿದನು. ಹೀಗಿದ್ದರೂ ಹೆರಿಂಗ್ ತೋರಿಸಿದಂತೆ, ಈ ಜನ್ಮಕುಂಡಲಿಗಳು 1634ರಲ್ಲಿ ಏಗರಿನಲ್ಲಿ ತನ್ನ ಕೊಲೆಯ ಬಗ್ಗೆ ಈ ಜನರಲ್‌ನಿಗೆ ಎಚ್ಚರಿಕೆ ಕೊಡುವದರಲ್ಲಿ ಸೋತು ಹೋದವು.

ಆಗಾಗ ವಿಜ್ಞಾದ ಸುಳ್ಳು ಕಲ್ಪನೆಗಳು ತಳ್ಳಿ ಬಿಡಲ್ಪಟ್ಟಂತೆಯೇ, ಬೈಬಲ್ ಬೋಧಿಸುವದರ ಕೃತಕ ಕಲ್ಪನೆಗಳೂ ತಳ್ಳಿ ಹಾಕಲ್ಪಟ್ಟಿವೆ. ಮೊದಲನೆಯ ಶತಮಾನದಲ್ಲಿ ಜಗತ್ತು ಅಂತ್ಯವಾಗುವುದು ಎಂದು ಕೆಲವರು ಯೋಚಿಸಿದಾಗ, ಅದು ಹೊಸ ಒಡೆಂಬಡಿಕೆಯ ಬರಹಗಾರರು ಬರೆದದ್ದರ ಬಗ್ಗೆ ತಪ್ಪಾದ ಭಾವನೆಯಾಗಿತ್ತು ಬರಹಗಾರರು ನಿಜವಾಗಿಯೂ ಹೇಳಿದ್ದು ಅದಾಗಿರಲಿಲ್ಲ. ಅದು ತಪ್ಪಾಗಿತ್ತು. ಬೈಬಲ್ ಬೆಂಬಲಿಸುತ್ತದೆಂದು ಊಹಿಸಿದ್ದರಿಂದ ಅನೇಕರು ಜಗತ್ತು ಕ್ರಿ.ಶ. 1000ದಲ್ಲಿ ಅಂತ್ಯಗೊಳ್ಳುವುದು ಎಂದು ಯೋಚಿಸಿದರು. ಬೇಗನೇ ತಾವು ತಪ್ಪಾಗಿದ್ದೇವೆಂದು ತಿಳಿದುಕೊಂಡರು - ಬೈಬಲ್ ಏನನ್ನು ಬೋಧಿಸಿತು ಎಂಬುದನ್ನು ಅವರು ತಿಳಿದಿರಲಿಲ್ಲ. ವಿಲಿಯಮ್ ಮಿಲ್ಲರನ ಹಿಂಬಾಲಕರು ತಮ್ಮ ದಿವಾರೋಹಣದ ನಿಲುವಂಗಿಗಳನ್ನು 1843ರಲ್ಲಿ ಧರಿಸಿಕೊಂಡಾಗ, ದೈಹಿಕ ಉತ್ಕ್ರಾಂತಿಯಲ್ಲಿ ನಂಬಿದ ಪಂಡಿತರಂತೆ ಯಥಾರ್ಥರಾಗಿದ್ದರು. ಆ ಎಡ್ವೆಂಟಿಸ್ಟರು, ವಿಕಾಸವಾದಿಗಳು ಸೃಷ್ಟಿಯನ್ನು ಕೆಡಿಸಿದಷ್ಟು ಬೈಬಲನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದರು.

ನಿಜವಾದ ವಿಜ್ಞಾನ ಮತ್ತು ನಿಜವಾದ ಧರ್ಮವನ್ನು ಕುರಿತು ಯಾವುದು ಹೆಚ್ಚು ಮಹತ್ವದ್ದಾಗಿದೆ? ವಿಜ್ಞಾನವು ಯಾವುದನ್ನೇ ಸಾಧಿಸಲಿ, ಅದು ಎಂದೂ ಜೀವನದ ಅಂತಿಮ ಗುರಿಯಾಗಿರದು. ವಿಜ್ಞಾನವು ಮಿತಿಯುಳ್ಳದ್ದಾಗಿದೆ; ಅದು ನೈಸರ್ಗಿಕವಾದವುಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ. ಮನುಷ್ಯನು ಪ್ರಾಣಿಗಿಂತ-ಹೆಚ್ಚಿನವನಾಗಿರುದರಿಂದ, ನೈಸರ್ಗಿಕ ವಿಜ್ಞಾನಗಳು ಮನುಷ್ಯನ ಎಲ್ಲಾ ಅಗತ್ಯತೆಗಳನ್ನು ಪೂರೈಸಲಾರವು. ಧರ್ಮವು, ದೊಡ್ಡ ಅಣ್ಣನಂತೆ, ಮನುಷ್ಯನನ್ನು ತೆಗೆದುಕೊಳ್ಳುತ್ತದೆ ಮತ್ತು ವಿಜ್ಞಾನವು ಬಿದ್ದುಹೋಗುವಾಗ ಅವನ ಆತ್ಮಿಕ ಅಗತ್ಯತೆಗಳನ್ನು ತುಂಬಿಸುತ್ತದೆ. ಮಾಡಲಿಕ್ಕೆ ವಿಜ್ಞಾನವು ಸನ್ನದ್ಧವಾಗಿರದೇ ಇರುವಂಥದದ್ದನ್ನು ಧರ್ಮವು ಮಾಡುತ್ತದೆ. ವಿಜ್ಞಾನವು ಗೌರವವುಳ್ಳದ್ದಾಗಿದೆ, ಆದರೆ ಧರ್ಮವು ಅದಕ್ಕಿಂತ ಹೆಚ್ಚಿನದಾಗಿದೆ. ನಾವು ವಿಜ್ಞಾನದ ವರಗಳನ್ನು "ಯಥಾರ್ಥವಾಗಿ ಆಶಿಸುತ್ತೇವೆ." ಆದರೆ "ಒಂದು ಹೆಚ್ಚು ಅತ್ಯುತ್ತಮವಾದ ಮಾರ್ಗ" ಇರುತ್ತದೆ. ವಿಜ್ಞಾನದ ತಪ್ಪು ಕಲ್ಪನೆಗಳು ಅವನನ್ನು ಧರ್ಮದಿಂದ ದೂರ ನಡಿಸಿದವು; ಆದರೆ ವಿಜ್ಞಾನಿಗಳೊಳಗೆ ಹೆಚ್ಚು ಉತ್ತಮ ಒಳ ನೋಟಗಳು ತನ್ನನ್ನು ಧರ್ಮಕ್ಕೆ ಹಿಂದಿರುಗಿ ನಡಿಸಿದವು ಮತ್ತು ಅದರ ಶ್ರೇಷ್ಠತೆಯನ್ನು ಗ್ರಹಿಸುವಂತೆ ಮಾಡಿದವು ಎಂದು ಡಾ. ಹೆನ್ರಿ ಲಿಂಕ್ ಹೇಳಿದ್ದಾರೆ.

> ಮಾನವ ಕುಲದ ಮೇಲೆ ದೈಹಿಕ ವಿಜ್ಞಾನಗಳು ದೊಡ್ಡ ಲಾಭಗಳನ್ನು ಕೊಟ್ಟಿದ್ದರೂ - ದೀರ್ಘ ಜೀವನ, ಹೆಚ್ಚು ಸುಖಕರವಾದ ಜೀವನ, ದೈಹಿಕ ನೋವಿನಿಂದ ಹೆಚ್ಚು ಯುಕ್ತವಾದ ಜೀವನ, ಮತ್ತು ಆಸಕ್ತಿಯುಳ್ಳ ವಸ್ತುಗಳ ಮಿತಿಯಿಲ್ಲದ ಪರಿಶುದ್ಧತೆಯೊಂದಿಗೆ ಮಾತ್ರ ಶೈಕ್ಷಣಿಕ ಅನುಭವಗಳೊಂದಿಗೆ ತುಂಬಿದ ಜೀವನ ಕೊಟ್ಟಿದ್ದರೂ - ವ್ಯಕ್ತಿಗಳು ಹೆಚ್ಚು ಸುಖದಿಂದಿರುವ, ಕುಟುಂಬಗಳು ಹೆಚ್ಚು ಅನ್ಯೋನ್ಯವಾಗಿರುವ, ಸರಕಾರಗಳು ಇಲ್ಲವೇ ರಾಜಕೀಯ ಸಂಘಟನೆಗಳು ಹೆಚ್ಚು ಬುದ್ಧಿವಂತಿಕೆಯಿಂದಿರುವ, ಇಲ್ಲವೇ ರಾಷ್ಟ್ರಗಳು ಯುದ್ಧಕ್ಕೆ ಹೋಗುವುದು ಕಡಿಮೆಯಾಗಿರುವ ಪುರಾವೆಯು ಇರುವದಿಲ್ಲ.[2]

ಎರಡು ಸಾವಿರ ವರ್ಷಗಳ ನಂತರ, ಮನಃ ಶಾಸ್ತ್ರವು, ಸುಖವು ಸ್ವಯಂ ತ್ಯಾಗದಿಂದ, ಸ್ವಯಂ - ಅಲ್ಲಗಳೆಯುವಿಕೆಯಿಂದ ಸಾಧಿಸಲ್ಪಡ ಬಹುದೆಂಬುದನ್ನು ಕಲಿತುಕೊಂಡಿದೆ. ಸ್ನೇಹಿತರು ಇರುವದಕ್ಕೆ, ಒಬ್ಬನು ಒಬ್ಬ ಸ್ನೇಹಿತನಾಗಿರತಕ್ಕದ್ದು - ಎಲ್ಲಾ ಸಮಯದಲ್ಲಿ ಯೇಸುವು ಇದನ್ನೇ ಒತ್ತಾಯಿಸುತ್ತಿದ್ದಾನೆ.

---

ಟಿಪ್ಪಣಿಗಳು

[1]*The 1997 Grolier Multimedia Encyclopedia,* s.v. “Galileo,” “Copernicus.”

[2]Henry C. Link, *Return to Religion* (New York: Macmillan Co., 1936), 14-15.

© 2009 Truth for Today